3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. 4060/2024

ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಆಂಜನೇಯ | ಚಾಸಾ-2, ಪ್ರಾಸ-2 |
| ತಂದೆಯ ಹೆಸರು ಃ | ಜಿ ಯಲ್ಲಪ್ಪ | |
| ವಯಸ್ಸು ಃ | 50 ವರ್ಷ | |
| ಉದ್ಯೋಗ ಃ | ಪೋಲಿಸ್ ಮುಖ್ಯ ಪೇದೆ | |
| ವಾಸ ಃ | ಬೀರೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ 03.01.2023 ರಿಂದ ಇಲ್ಲಿಯವರೆಗೆ ನಾನು ಬೀರೂರು ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 23.06.2024 ರಂದು ನಾನು, ಚಾಸಾ-3, 4, 5 ಮತ್ತು ಚಾಸಾ-1 ರವರೊಂದಿಗೆ ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆ ಸಮಯದಲ್ಲಿ ಬಳ್ಳಾರಿ ಕ್ಯಾಂಪ್ ಬಳಿ ಗಸ್ತಿನಲ್ಲಿದ್ದಾಗ ಚಾಸಾ-1 ರವರಿಗೆ ದೂರವಾಣಿ ಮುಖಾಂತರ ಒಂದು ಖಚಿತ ಮಾಹಿತಿ ಬಂದಿದ್ದು ಎಳವರಹಟ್ಟಿ ಗ್ರಾಮದ ಪ್ರಶಾಂತ್ ಎಂಬುವವರ ತೋಟದ ಮುಂಭಾಗ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು, ಸದರಿ ವಿಚಾರವನ್ನು ಕೂಡಲೇ ಚಾಸಾ-1 ರವರು ನಮಗೆ ತಿಳಿಸಿ ಬಳ್ಳಾರಿ ಕ್ಯಾಂಪ್ ಎಳವರಹಟ್ಟಿ ರಸ್ತೆಯಲ್ಲಿ ನಿಂತಿದ್ದ ಚಾಸಾ-6 ಮತ್ತು 7 ರವರನ್ನು ಕರೆಸಿ ಅವರಿಗೆ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿದ ಮೇರೆಗೆ ನೋಟಿಸು ಜಾರಿ ಮಾಡಿರುತ್ತಾರೆ. ನಂತರ ಅವರು ಒಪ್ಪಿದ ಮೇರೆಗೆ ಅವರನ್ನು ಇಲಾಖಾ ಜೀಪಿನಲ್ಲಿ ಕೂರಿಸಿಕೊಂಡು ಎಳವರಹಟ್ಟಿ ಗ್ರಾಮದ ಪ್ರಶಾಂತ್ ಎಂಬುವವರ ತೋಟದ ಮುಂಭಾಗ ಸಂಜೆ 7.00 ಗಂಟೆಗೆ ತಲುಪಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿದಾಗ ಇಲಾಖಾ ಜೀಪನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದನ್ನು ನಾನು ಹಾಗೂ ಚಾಸಾ-3 ರವರು ಸುತ್ತುವರೆದು ಹಿಡಿದಿರುತ್ತೇವೆ. ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲದೊಂದಿಗೆ ಚಾಸಾ-1 ರವರ ಮುಂದೆ ಹಾಜರುಪಡಿಸಿರುತ್ತೇವೆ. ಚಾಸಾ-1 ರವರು ಆತನ ಹೆಸರು ವಿಳಾಸ ಕೇಳಿ ಆತನ ಹೆಸರು ಶ್ರೀಧರ ವಾಸಃ ಎಳವರಹಟ್ಟಿ ಎಂದು ತಿಳಿಸಿದ್ದು, ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಮದ್ಯ ಇರುವುದು ಕಂಡುಬಂತು. ಆತನ ಬಳಿ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಗಿ ಇದೆಯಾ ಎಂದು ಕೇಳಿದಾಗ ಅವರು ಇಲ್ಲಾ ಎಂದು ತಿಳಿಸಿರುತ್ತಾರೆ. ನಂತರ ಮದ್ಯವನ್ನು ನೆಲಕ್ಕೆ ಸುರಿದು ಪಂಚರ ಸಮಕ್ಷಮ ನೋಡಿದಾಗ 90 ಎಂಎಲ್ ನ ರಾಜಾವಿಸ್ಕಿಯ 111 ಪೌಚುಗಳು ಇದ್ದವು. ಅವುಗಳ ಪೈಕಿ 55 ಪೌಚುಗಳ ಮೇಲೆ ಬ್ಯಾಚ್ ನಂ 656 ಎಂದು ಮತ್ತು 56 ಪೌಚುಗಳ ಮೇಲೆ ಬ್ಯಾಚ್ ನಂ 659 ಎಂದು ಬರೆದಿತ್ತು ಅವುಗಳ ಅಂದಾಜು ಮೌಲ್ಯ ರೂ. 4,329 ಎಂದು ಪಂಚರು ಅಭಿಪ್ರಾಯಪಟ್ಟಿರುತ್ತಾರೆ. ನಂತರ ಚಾಸಾ-1 ರವರು ಪಂಚರ ಸಮಕ್ಷಮ ಮಹಜರ್ ಜರುಗಿಸಿ ಅದೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ

ಅದರ ಬಾಯನ್ನು ದಾರದಿಂದ ಕಟ್ಟಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿಯನ್ನು ಪಡೆದು ಚಾಸಾ-1 ರವರು ಸಹಿ ಮಾಡಿ ಚೀಲದ ಮೇಲೆ ಅಂಟಿಸಿರುತ್ತಾರೆ. ಮಹಜರನ್ನು ರಾತ್ರಿ 7.10 ರಿಂದ 8.10 ಗಂಟೆವರೆಗೆ ಮಾಡಿರುತ್ತಾರೆ. ನಂತರ ಆರೋಪಿ ಮತ್ತು ಮದ್ಯವನ್ನು ಠಾಣೆಗೆ ತಂದು ಚಾಸಾ-1 ರವರು ವರದಿ ತಯಾರಿಸಿ ಠಾಣಾಧಿಕಾರಿಯಾದ ಚಾಸಾ-9 ರವರಿಗೆ ನೀಡಿರುತ್ತಾರೆ. ಸಾಕ್ಷಿಯು ನಿಪಿ-1 ರ ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-2 ರ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮುಮಾ ಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಡಿ ಎಸ್ ವಕೀಲರಿಂದಃ

ಪ್ರಕರಣದ ಸಂಬಂಧ ಚಾಸಾ-1 ರವರು ನಮಗೆ ವಿಚಾರ ತಿಳಿಸಿರುತ್ತಾರೆ. ಬಳ್ಳಾರಿ ಕ್ಯಾಂಪಿನಿಂದ ಘಟನಾ ಸ್ಥಳ 2 ರಿಂದ 2.5 ಕಿಮಿ ಅಂತರ ಇರುತ್ತದೆ. ಘಟನಾ ಸ್ಥಳಕ್ಕೆ ಇಲಾಖಾ ಜೀಪಿನಲ್ಲಿ ನಾನು, ಚಾಸಾ-1, 3, 4 ರಿಂದ 7 ರವರು ಹೋಗಿರುತ್ತೇವೆ. ಚಾಸಾ-1 ರವರಿಗೆ ಮಾಹಿತಿ ಬಂದಾಗ ಸಂಜೆ 6.30 ಗಂಟೆ ಸಮಯವಾಗಿತ್ತು. ಚಾಸಾ-6 ಮತ್ತು 7 ರವರಿಗೆ ಬಳ್ಳಾರಿ ಕ್ಯಾಂಪಿನ ಎಳವರಹಟ್ಟಿ ರಸ್ತೆಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತಾರೆ. ಘಟನಾ ಸ್ಥಳಕ್ಕೆ ಹೋದಾಗ 7.00 ಗಂಟೆ ಸಮಯವಾಗಿತ್ತು. ಚಾಸಾ-6 ಮತ್ತು 7 ರವರಿಗೆ ಸಂಜೆ 6.45 ಗಂಟೆಗೆ ಚಾಸಾ-1 ರವರು ನೋಟಿಸು ನೀಡಿರುತ್ತಾರೆ. ಪೋಲಿಸ್ ನೋಟಿಸಿನಲ್ಲಿ ಸಂಜೆ 7.10 ಗಂಟೆಗೆ ನೋಟಿಸು ಜಾರಿ ಮಾಡಲಾಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. ಮದ್ಯದ ಪೌಚುಗಳನ್ನು ಪಂಚರು ಎಣಿಸಿರುತ್ತಾರೆ. ಮದ್ಯದ ಪೌಚುಗಳನ್ನು ಪಂಚರು ಎಣಿಸಿದ ಬಗ್ಗೆ ಮಹಜರ್ ನಲ್ಲಿ ನಮೂದು ಇರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ನೀಡಿದ ಹೇಳಿಕೆಯಲ್ಲಿ ಪಂಚರು ಎಣಿಸಿರುತ್ತಾರೆ ಎಂದು ಹೇಳಿರುವುದಿಲ್ಲ. ಆ ರೀತಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿ ಮದ್ಯ ಮಾರಾಟ ಮಾಡುವುದನ್ನು ನೀವು ಖುದ್ದು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಮ್ಮನ್ನು ನೋಡಿ ಆರೋಪಿ ಮದ್ಯದ ಚೀಲವನ್ನು ಹಿಡಿದುಕೊಂಡು ಓಡಿರುವುದನ್ನು ನಾನು ನೋಡಿರುತ್ತೇನೆ. ಘಟನಾ ಸ್ಥಳವು ರಸ್ತೆ ಎಂದರೆ ಸರಿ. ಅಲ್ಲಿ ಯಾವುದೇ ಬೀದಿ ದೀಪ ಇರಲಿಲ್ಲ ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ಇತ್ತು ಎಂದು ನುಡಿಯುತ್ತಾರೆ. ಮದ್ಯವನ್ನು ಕುಡಿದು ಎಸೆದಿರುವ ಪೌಚುಗಳು ಘಟನಾ ಸ್ಥಳದಲ್ಲಿ ಇತ್ತೋ ಇಲ್ಲವೋ ಎಂದು ನಾನು ಗಮನಿಸಿರುವುದಿಲ್ಲ. ನಿಪಿ-2 ರ ಛಾಯಾಚಿತ್ರದಲ್ಲಿ ಯಾವುದೇ ಖಾಲಿ ಮದ್ಯದ ಪೌಚುಗಳು ಕಂಡುಬರುತ್ತಿಲ್ಲ ಎಂದರೆ ಸರಿ.

ಮಹಜರನ್ನು ಸಂಜೆ 7.10 ರಿಂದ 8.10 ರವರೆಗೆ ಬರೆದಿರುತ್ತಾರೆ. ಮಹಜರನ್ನು ನಾನು ಬರೆದಿರುವುದಿಲ್ಲ ಚಾಸಾ-5 ರವರು ಬರೆದಿರುತ್ತಾರೆ. ಪಿ ಎಫ್ ನ್ನು ಯಾವಾಗ ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲಾ. ಮಹಜರ್ ನಲ್ಲಿರುವ ಬರವಣಿಗೆ, ನೋಟಿಸು ಮತ್ತು ಪಿ ಎಫ್ ನ ಬರವಣಿಗೆ ಒಬ್ಬರದ್ದೆ ಎಂದರೆ ನನಗೆ ಮಾಹಿತಿ ಇಲ್ಲಾ. ಚಾಸಾ-10 ರವರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ. ಪಿ ಎಫ್ ನಲ್ಲಿ

ಚಾಸಾ-10 ರವರ ಸಹಿ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಠಾಣೆಯಲ್ಲೇ ಕುಳಿತು ಸುಳ್ಳು ಮಹಜರ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ರ ಛಾಯಾಚಿತ್ರವನ್ನು ಈ ಘಟನೆಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಮುಮಾಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.